Brochure Containing the Details of Common Entrance Test – 2011
for Admission to Professional Courses in Karnataka.

# Contents


| Item | | Page No. |
|---|---|---|
| | Important instructions for the candidates about Common Entrance Test and the later seat selection process | 02 |
| | What is new in this year? | 09 |
| | Calendar of Events | 10 |
| **Chapter - I** | | |
| 01. | Introduction | 11 |
| 02. | Mode of conducting the test | 11 |
| 03. | Who can apply? | 12 |
| 04. | How to fill the application form? | 14 |
| 05. | Where to submit the filled application form? | 18 |
| | Assignment of exam centres | 18 |
| 06. | Eligibility for Government seats | 19 |
| 07. | Reservation of seats in favour of certain categories | 22 |
| **Chapter - II** | | |
| 01. | Syllabus | 27 |
| 02. | Duration, question paper and OMR answer sheets | 27 |
| 03. | Specimen copy of the OMR answer sheets | 28 |
| 04. | Determination of merit and publication of merit lists | 29 |
| **Chapter - III** | | |
| 01. | Documents to be produced during seat selection process | 32 |
| 02. | Admission fee and percentage of seats (Government share) | 34 |
| 03. | Government seats (seat matrix) | 35 |
| 04. | A note on online seat selection | 35 |
| 05. | Procedures followed during the seat selection process | 36 |
| 06. | Selection of seats by the candidates and admission | 37 |
| | A note on refund and forfeiture of fee | 52 |
| | Prominent telephone numbers | 52 |
| **List of appendices** | | |
| Appendix - I | List of places where the 'CET 2011' test centres are located | 53 |
| Appendix - II | State, District and Taluk Codes | 53 |
| Appendix - III | List of places which do not come under the purview of rural areas | 55 |
| Appendix - IV | List of games & sports events for the purpose of item 7(1) (b) of Chapter - I | 57 |
| Appendix - V | Specimen of prescribed formats | 58 |
| Appendix - VI | Professional colleges information | 61 |
| Appendix - VII | Schedule of seat selection process | 83 |
| Appendix - VIII | Annexure II to G.O. no. SWD 225 BCA 2000 dated 30-03-2002 of Social Welfare Department fixing income limit Rs. 2.00 Lakhs as the upper limit for eligibility under various categories | 88 |

## IMPORTANT POINTS RELATED TO COMMON ENTRANCE TEST – 2011 AND SEAT SELECTION PROCESS.

### PRECEDING TO ENTRANCE TEST

1. The application form is a combination of both ICR and OMR concept. Candidates are required to fill the application form using blue or black ink ballpoint pen and also for few items candidates are required to fill and shade the respective circles of item.
2. The information / particulars furnished by the candidates in their CET - 2011 application form is FINAL.
3. Before claiming eligibility for Government seats, make sure that you satisfy any one of the eligibility clauses detailed in Item – 6 of Chapter – I of the brochure. The candidates who do not satisfy any of the eligibility clauses will not be eligible for admission to Government seats.
4. If the information furnished by the candidates in the application form or any other documents submitted by the candidates / parents are found to be false / incorrect, such candidate's seat will be cancelled at any point of time during his course of study and criminal proceedings will be initiated by the Government against the candidate.
5. The ward of Jammu & Kashmiri migrants are required to appear for the Common Entrance Test for admission to professional courses for the seats earmarked for them by the Government. (Refer Item–7(5) of Chapter – I of the brochure.)
6. Make sure that you have affixed **ONLY** your LEFT HAND THUMB IMPRESSION within the space provided on the backside of the application form.
7. Before submitting the filled application form to the Principals / KEA, the candidates should take a photocopy of the filled application form and should keep it with them for all future reference / correspondence.
8. While submitting the filled application form, do not enclose any paper / certificate / marks card to the filled application form.
9. If you have studied TEN full academic years continuously from 1st to 10th standards in Kannada Medium**,** then you are eligible to claim reservation under Kannada Medium quota.
10. Candidates who have submitted their filled application form to the concerned schools / colleges within Karnataka, will get their Admission Tickets through the respective schools / colleges. The candidates who have submitted their filled application forms through 'Speed Post' directly to KEA will get their Admission Tickets by 'Speed Post' to the address furnished by them in their application form.
11. If any candidate fails to receive the admission ticket within the stipulated time, then he / she has to contact the respective Principals of the institution / KEA office with a photocopy of the filled application form.

### DURING THE ENTRANCE TEST

1. **The Common Entrance Test will be held for TWO DAYS on four different sessions on** 27-04-2011 **and** 28-04-2011.
2. The candidates must appear for Common Entrance Test in PCB subjects for admission to Medical / Dental / Indian System of Medicine and Homoeopathy courses and PCM subjects for admission to Engineering / Technology Courses conducted by the Karnataka Examinations Authority. For admission to Architecture course candidates must appear for NATA (National Aptitude Test in Architecture) conducted by the Council of Architecture. Visit KEA website for List of institutions conducting NATA (National Aptitude Test in Architecture) in Karnataka.
3. The candidates should read the instructions printed on the OMR answer sheets before answering. The candidates have to mark the correct answers on the OMR answer sheets using **BLUE OR BLACK INK BALL POINT PEN ONLY.**

4. After completion of each session of the test, the candidates must affix their LEFT HAND THUMB IMPRESSION in the space provided on the bottom portion of OMR answer sheet before handing over the same to the room invigilator.
5. After completion of each session of the test, the candidates will be allowed to carry replica of the filled OMR answer sheet. Such replicas should be preserved for a period of one year.
6. THERE WILL BE NO NEGATIVE MARKING IN RESPECT OF WRONG ANSWERS BUT MARKS WILL NOT BE AWARDED IN RESPECT OF MORE THAN ONE ANSWER INDICATED AGAINST A QUESTION BY A CANDIDATE ON THE OMR ANSWER SHEETS.

## AFTER ENTRANCE TEST

1. The ANSWER KEY will be published within SEVEN days after the completion of the entrance test on the KEA website. The candidates / parents / lecturers, can file their objections, if any, within FIVE days in respect of any of the published answer key, along with all the supporting documents & justification. Objections received by KEA will be placed before the Expert Committee, whose decision will be final in this regard.
2. The candidates who are claiming eligibility under special categories such as NCC, Sports, Anglo-Indian, Defence and Ex-Defence must submit their special category documents to KEA office during office hours in person invariably on the dates notified against each Special category at Chapter – III of Item 1 (A) of the brochure. The candidates who do not submit the special category certificates on the notified dates will not be considered for document verification and also for seat selection under the respective special categories.
3. The regular students (fresher) appearing for Karnataka 2nd PUC Annual 2011 and Repeater students of Karnataka 2nd PUC who have appeared during 2011, **need not submit the qualifying examination marks card to KEA. However** Repeater students of Karnataka 2nd PUC who have already passed the examination before 2011 and the students of CBSE, CISCE, 10+2, and other boards who are appearing 12th standard examination during 2011 must send a photocopy of their qualifying examination marks card (on which the CET Number is boldly written) either in person or only through 'Speed Post' to the KEA, Bangalore after completion of CET - 2011 on or before **11-05-2011**. However, the candidates who submit photocopy of their Q. E. marks cards after **11-05-2011**, will get their ranks before the commencement of the seat selection process or whenever they submit the Q. E. marks card.
4. The rank list for Medical and Dental courses will be prepared and published only on the basis of marks obtained by candidates in PCB subjects in the Common Entrance Test. The candidates who secure 50% (GM) of marks in PCB subjects in the qualifying examination and also in the Common Entrance Test will only be eligible for assignment of Medical / Dental ranks. However, the marks in PCB subjects in both Q. E. and CET will be 40% in case of candidates belonging to SC, ST, CAT – 1, 2A, 2B, 3A & 3B categories. Further, the candidates (GM) who secure less than 50% of marks taken together in PCB subjects in the Common Entrance Test and less than 40% in case of SC, ST, CAT – 1, 2A, 2B, 3A & 3B categories, will not be awarded any rank for admission to Medical / Dental courses.
5. The rank list for Indian System of Medicine & Homoeopathy courses will be published only in respect of candidates (GM) who secure 50% of marks taken together in PCB subjects in the qualifying examination; (40% in case of SC, ST, CAT – 1, 2A, 2B, 3A & 3B category candidates) irrespective of marks secured in PCB subjects in the Common Entrance Test.
6. The rank list for Engineering & Technology courses will be published only in respect of candidates (GM) who secure 50% of marks taken together in the optional subjects in the qualifying examination, (45% in case of SC, ST, CAT – 1, 2A, 2B, 3A & 3B category candidates) irrespective of marks secured in PCM subjects in the Common Entrance Test.
7. The rank list for Architecture course will be published only in respect of candidates who have studied Mathematics as one of the optional subjects and secured an aggregate minimum of 50% marks (GM) in the

Qualifying examination (45% in case of SC, ST, CAT – 1, 2A, 2B, 3A & 3B and candidates, person with disability of mental retardation or mental illness (including dislexia) category candidates) and 40% marks in NATA (including SC, ST, CAT – 1, 2A, 2B, 3A & 3B categories. The candidate who wants to select only Architecture seat need **not to appear for Common Entrance Test**, but they have to **submit the** CET - 2011 filled application form without fail within the specified time. **NATA scorecard** should be submitted to this office along with a copy of the 2nd PU / 12th Std. examination marks card.

8. The candidates are requested to verify their qualifying examination marks printed on the result sheets without fail, if there is any discrepancy with reference to qualifying examination marks, the same should be brought to the notice of this office immediately for assignment of new ranks, if any.
9. If the qualifying examination marks of the candidates get changed due to revaluation or re-totaling then the candidates are required to submit a copy of the changed marks card to the KEA for assignment of revised / new rank.
10. The seat selection in respect of Physically Disabled, NCC and Sports special category candidates will be held separately for Medical / Dental, I. S. M. & Homoeopathy and Engineering / Technology courses. The other Special category candidates such as Defence, Ex-Defence, Scouts & Guides and Anglo-Indian will be allowed to select the respective special category seats along with the general merit candidates in the order of merit, when their turn comes in the general admission round. (Refer Appendix – VII for details).
11. All the candidates (GM, SC, ST Category – I and OBC category candidates) must compulsorily produce the STUDY CERTIFICATE obtained from the head of the institution where the candidate has passed the 10th standard / SSLC examination, by mentioning the Standards, Academic years, Mother Tongue as per the admission register of the institution. (Refer Appendix – V for study certificate proforma)
12. Candidates belonging to reserved categories should submit caste / income certificate as the case may be, issued by the Concerned Tahasildar in **Form 'D'** for SC, ST, in **Form 'E'** for Category-I and in **Form 'F'** for 2A, 2B, 3A and 3B categories.
13. The candidates who had obtained a seat in the previous years in any discipline through KEA (CET Cell) will not be eligible for selection of a seat in the same discipline during this year. Such candidates who select seats in the other discipline will forfeit the seat already selected during previous years.
14. Please read the refund and forfeiture conditions detailed in this brochure carefully.
15. KEA will publish on its website all the details of candidates who have selected seats under reserved category in Medical, Dental, ISM & H, Engineering and Architecture courses, such as candidate's name, father's name, category under which seat selected, annual income of the parent etc., after the casual vacancy round.
16. If a candidate does not surrender the seat to KEA during casual vacancy seat selection round before his/her turn comes, then he / she is deemed to have got admitted to the seat selected by him / her in either of the rounds.
17. If a candidate decides to surrender the seat, he / she has to surrender the seat only to KEA, merely not reporting to the selected college should not be presumed by the candidate that he / she has surrendered the seat to KEA.
18. The candidates who claim seat under rural category will have to obtain a rural study certificate from the respective school / high school issued by the head of the institution which should be countersigned by concerned Block Educational Officer (BEO) as per format shown at page 56.
19. General merit candidates who claim seat in rural category should also submit an income certificate issued from the concerned Tahasildar along with the rural study certificate, as per format shown at page 52.
20. The candidates who have studied in the areas mentioned in Appendix – III are not eligible to claim rural category seat. **However, if the place where the candidate had studied from 1st to 10th standard had been declared as a rural area at the time of his / her studies, he / she will be eligible under rural quota, even though the same place has been declared as urban area later**.

## ಸಾಮಾನ್ಯ ಪ್ರವೇಶ ಪರೀಕ್ಷೆ 2011 ಮತ್ತು ಸೀಟು ಆಯ್ಕೆ ಪ್ರಕ್ರಿಯೆಗೆ ಸಂಬಂಧಿಸಿದಂತೆ ಮುಖ್ಯ ಸೂಚನೆಗಳು

### ಪರೀಕ್ಷಾ ಪೂರ್ವ ಸಿದ್ಧತೆ

1. ಅರ್ಜಿ ನಮೂನೆಯು ಐಸಿಆರ್ ಮತ್ತು ಓಎಂಆರ್ ವಿಧಾನದ ಅರ್ಜಿಯಾಗಿರುತ್ತದೆ. ಅಭ್ಯರ್ಥಿಗಳು ಅರ್ಜಿಯನ್ನು ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ನನ್ನು ಉಪಯೋಗಿಸಿ ಬರೆಯಬೇಕು ಹಾಗೂ ಕೆಲವು ಐಟಂಗಳನ್ನು ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನೂ ಸಹ ತುಂಬಬೇಕು.
2. ಸಿಇಟಿ 2011ರ ಅರ್ಜಿಯಲ್ಲಿ ಅಭ್ಯರ್ಥಿಗಳು ನೀಡುವ ಎಲ್ಲ ಮಾಹಿತಿಗಳನ್ನೂ ಅಂತಿಮವೆಂದು ಪರಿಗಣಿಸಲಾಗುತ್ತದೆ.
3. ಸರ್ಕಾರಿ ಸೀಟುಗಳ ಪ್ರವೇಶಕ್ಕಾಗಿ ಬ್ರೋಷರ್‌ನ ಅಧ್ಯಾಯ–1ರ ಐಟಂ–6ರಲ್ಲಿ ನೀಡಿರುವ ಅರ್ಹತಾ ಕಂಡಿಕೆಗಳನ್ನು ಪರಿಪೂರ್ಣವಾಗಿ ಓದಿ, ತಾವು ಯಾವುದಾದರೂ ಒಂದು ಅರ್ಹತಾ ನಿಯಮದ ಅಡಿಯಲ್ಲಿ ಅರ್ಹರಿದ್ದೀರಿ ಎಂದು ಖಾತ್ರಿಪಡಿಸಿಕೊಳ್ಳಬೇಕು.
4. ಅರ್ಜಿ ನಮೂನೆಯಲ್ಲಿ ಅಭ್ಯರ್ಥಿಗಳು ಒದಗಿಸಿರುವ ಮಾಹಿತಿಗಳು ಸುಳ್ಳು ಅಥವಾ ಅಪೂರ್ಣವಾಗಿದ್ದಲ್ಲಿ ಅಥವಾ ಅಭ್ಯರ್ಥಿ ಅಥವಾ ಅವರ ಪೋಷಕರು ಸುಳ್ಳು ಅಥವಾ ನಕಲಿ ಪ್ರಮಾಣ ಪತ್ರಗಳು ಸಲ್ಲಿಸಿದ್ದು ಕಂಡುಬಂದಲ್ಲಿ ಆ ಅಭ್ಯರ್ಥಿಯ ಸೀಟನ್ನು ವ್ಯಾಸಂಗದ ಯಾವ ಅವಧಿಯಲ್ಲಾದರೂ ರದ್ದುಗೊಳಿಸಲಾಗುವುದು ಮತ್ತು ಅಭ್ಯರ್ಥಿಯ ಮೇಲೆ ಸರ್ಕಾರವು ಕ್ರಿಮಿನಲ್ ಮೊಕದ್ದಮೆಯನ್ನು ಹೂಡುವುದು.
5. ಜಮ್ಮು ಮತ್ತು ಕಾಶ್ಮೀರಿ ವಲಸೆಗಾರರ ಮಕ್ಕಳು ಅವರಿಗೆ ಸರ್ಕಾರವು ನಿಗದಿಪಡಿಸುವ ಸೀಟುಗಳನ್ನು ಆಯ್ಕೆ ಮಾಡಿಕೊಳ್ಳಲು ಸಾಮಾನ್ಯ ಪ್ರವೇಶ ಪರೀಕ್ಷೆಗೆ ಕಡ್ಡಾಯವಾಗಿ ಹಾಜರಾಗಬೇಕು. (ಈ ಬಗ್ಗೆ ಬ್ರೋಷರ್‌ನ ಅಧ್ಯಾಯ–1ರ ಐಟಂ–7(5)ನ್ನು ನೋಡಿ.)
6. ಅರ್ಜಿಯ ಹಿಂಬದಿಯಲ್ಲಿ ಎಡಗೈ ಹೆಬ್ಬೆರಳಿನ ಗುರುತಿಗಾಗಿ ನಿಗದಿಪಡಿಸಿರುವ ಜಾಗದಲ್ಲಿ ತಾವು ತಮ್ಮ ಎಡಗೈ ಹೆಬ್ಬೆಟ್ಟಿನ ಗುರುತನ್ನು ಕಡ್ಡಾಯವಾಗಿ ಹಾಕಬೇಕು.
7. ಭರ್ತಿ ಮಾಡಿದ ಅರ್ಜಿಯನ್ನು ಪ್ರಿನ್ಸಿಪಾಲರಿಗೆ ಅಥವಾ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸಲ್ಲಿಸುವ ಮೊದಲು ಭರ್ತಿಮಾಡಿದ ಅರ್ಜಿಯ ಒಂದು ಫೋಟೋ ಪ್ರತಿಯನ್ನು ಮಾಡಿಟ್ಟುಕೊಳ್ಳಲು ತಿಳಿಸಿದೆ.
8. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವಾಗ ಅದರ ಜೊತೆಯಲ್ಲಿ ಯಾವುದೇ ರೀತಿಯ ಅಡಕಗಳನ್ನು / ಪ್ರಮಾಣ ಪತ್ರಗಳನ್ನು / ಅಂಕಪಟ್ಟಿಗಳನ್ನು ಲಗತ್ತಿಸಬಾರದು.
9. ಕನ್ನಡ ಮಾಧ್ಯಮ ಮೀಸಲಾತಿ ಪಡೆಯಬೇಕಾದಲ್ಲಿ ತಾವು 1ನೇ ತರಗತಿಯಿಂದ 10ನೇ ತರಗತಿಯವರೆಗಿನ ಪೂರ್ಣ ವಿದ್ಯಾಭ್ಯಾಸವನ್ನು ಕನ್ನಡ ಮಾಧ್ಯಮದಲ್ಲಿಯೇ ಓದಿರಬೇಕು.
10. ಕರ್ನಾಟಕದಲ್ಲಿರುವ ಶಾಲಾ ಕಾಲೇಜುಗಳಿಗೆ ಭರ್ತಿಮಾಡಿದ ಅರ್ಜಿಗಳನ್ನು ಸಲ್ಲಿಸಿದ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರಗಳನ್ನು ಅವರವರ ಶಾಲಾ–ಕಾಲೇಜುಗಳಿಗೆ ನೇರವಾಗಿ ಕಳುಹಿಸಿಕೊಡಲಾಗುವುದು. ಅಂಚೆ ಮೂಲಕ ಅರ್ಜಿಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳಿಗೆ, ಪ್ರವೇಶ ಪತ್ರಗಳನ್ನು ಅವರು ತಮ್ಮ ಅರ್ಜಿ ನಮೂನೆಯಲ್ಲಿ ನಮೂದಿಸಿರುವ ವಿಳಾಸಗಳಿಗೆ ಸ್ಪೀಡ್ ಪೋಸ್ಟ್ ಮುಖಾಂತರ ನೇರವಾಗಿ ಕಳುಹಿಸಲಾಗುವುದು.
11. ನಿಗದಿತ ದಿನಾಂಕದೊಳಗೆ ಯಾವುದೇ ಅಭ್ಯರ್ಥಿಗೆ ಪ್ರವೇಶ ಪತ್ರವು ತಲುಪದಿದ್ದಲ್ಲಿ ಅಂತಹ ಅಭ್ಯರ್ಥಿಗಳು ಆಯಾ ಶಾಲಾ ಕಾಲೇಜುಗಳ ಪ್ರಿನ್ಸಿಪಾಲ್ / ಕರ್ನಾಟಕ ಪರೀಕ್ಷಾ ಪ್ರಾಧಿಕಾರವನ್ನು ಭರ್ತಿಮಾಡಿದ ಅರ್ಜಿಯ ಫೋಟೊ ಪ್ರತಿಯೊಂದಿಗೆ ಸಂಪರ್ಕಿಸಬೇಕು.

### ಪರೀಕ್ಷಾ ಸಮಯದಲ್ಲಿ

1. **ಸಾಮಾನ್ಯ ಪ್ರವೇಶ ಪರೀಕ್ಷೆಯು ದಿನಾಂಕ 27–04–2011 ಮತ್ತು 28–04–2011 ರಂದು ಎರಡು ದಿನ, ನಾಲ್ಕು ಬೇರೆ ಬೇರೆ ಅಧಿವೇಶನಗಳಲ್ಲಿ ನಡೆಯುವುದು.**

2. ಅಭ್ಯರ್ಥಿಗಳು ವೈದ್ಯಕೀಯ ಮತ್ತು ದಂತ ವೈದ್ಯಕೀಯ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆಯ ಪಿ.ಸಿ.ಬಿ ವಿಷಯಗಳಿಗೆ ಮತ್ತು ಇಂಜಿನಿಯರಿಂಗ್ / ಟೆಕ್ನಾಲಜಿ ಕೋರ್ಸುಗಳ ಪ್ರವೇಶಕ್ಕಾಗಿ ಪಿ.ಸಿ.ಎಂ. ವಿಷಯಗಳಿಗೆ ಕಡ್ಡಾಯವಾಗಿ ಹಾಜರಾಗಬೇಕು. ಆರ್ಕಿಟೆಕ್ಚರ್ ಕೋರ್ಸ್‌ನ ಪ್ರವೇಶಕ್ಕಾಗಿ ಕೌನ್ಸಿಲ್ ಆಫ್ ಆರ್ಕಿಟೆಕ್ಚರ್ ರವರು ನಡೆಸುವ NATA (National Aptitude Test in Architecture) ಪರೀಕ್ಷೆಗೆ ಹಾಜರಾಗಬೇಕು. (ಕರ್ನಾಟಕದಲ್ಲಿ ನಾಟಾ ಪರೀಕ್ಷೆ ನಡೆಸುವ ಸಂಸ್ಥೆಗಳ ವಿವರಗಳನ್ನು ಕೆಇಎ ವೆಬ್‌ಸೈಟ್‌ನಲ್ಲಿ ನೀಡಿದೆ).
3. ಓ.ಎಂ.ಆರ್. ಉತ್ತರ ಪತ್ರಿಕೆಯ ಹಾಳೆಗಳಲ್ಲಿ ಉತ್ತರಿಸುವ ಮೊದಲು ಅಭ್ಯರ್ಥಿಗಳು ಅದರಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೇ ಓದಿಕೊಳ್ಳಬೇಕು. ಓ.ಎಂ.ಆರ್. ಉತ್ತರ ಪತ್ರಿಕೆಯ ಹಾಳೆಗಳಲ್ಲಿ ಸರಿ ಉತ್ತರಗಳನ್ನು ನಮೂದಿಸಲು ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ನನ್ನು ಮಾತ್ರ ಉಪಯೋಗಿಸಬೇಕು.
4. ಪರೀಕ್ಷೆಯ ಪ್ರತಿ ಅಧಿವೇಶನ ಮುಗಿದ ನಂತರ ಎಲ್ಲಾ ಅಭ್ಯರ್ಥಿಗಳೂ ತಮ್ಮ ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಕೊಠಡಿಯ ಮೇಲ್ವಿಚಾರಕರಿಗೆ ನೀಡುವ ಮೊದಲು ಓ.ಎಂ.ಆರ್. ಉತ್ತರ ಪತ್ರಿಕೆಯ ಕೆಳಭಾಗದ ನಿಗದಿಪಡಿಸಿರುವ ಸ್ಥಳದಲ್ಲಿ ಕಡ್ಡಾಯವಾಗಿ ತಮ್ಮ ಎಡಗೈ ಹೆಬ್ಬೆರಳಿನ ಗುರುತನ್ನು ಹಾಕುವುದು.
5. ಪರೀಕ್ಷೆಯ ಪ್ರತಿ ಅಧಿವೇಶನ ಮುಗಿದ ನಂತರ ಅಭ್ಯರ್ಥಿಗಳು ತಮ್ಮ ಓ.ಎಂ.ಆರ್. ಉತ್ತರ ಪತ್ರಿಕೆಯ ಯಥಾ ಪ್ರತಿಯನ್ನು ತೆಗೆದುಕೊಂಡು ಹೋಗಲು ಅವಕಾಶವಿರುತ್ತದೆ ಹಾಗೂ ಅದನ್ನು ಕನಿಷ್ಠ ಒಂದು ವರ್ಷದವರೆಗೆ ಸಂರಕ್ಷಿಸಿಟ್ಟುಕೊಳ್ಳಬೇಕು.
6. ತಪ್ಪು ಉತ್ತರಗಳಿಗೆ ಋಣಾತ್ಮಕ ಮೌಲ್ಯಮಾಪನ ಇರುವುದಿಲ್ಲ ಆದರೆ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಉತ್ತರಗಳನ್ನು ಗುರುತುಮಾಡಿದ್ದಲ್ಲಿ ಅಂಕಗಳನ್ನು ನೀಡಲಾಗುವುದಿಲ್ಲ.

## ಪರೀಕ್ಷಾ ನಂತರದ ಸಿದ್ಧತೆಗಳು

1. ಪ್ರವೇಶ ಪರೀಕ್ಷೆ ಮುಗಿದ ಏಳು ದಿನಗಳೊಳಗಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಸರಿ ಉತ್ತರ (ANSWER KEY) ಗಳನ್ನು ಪ್ರಕಟಿಸಲಾಗುವುದು. ಅಭ್ಯರ್ಥಿಗಳು / ಪೋಷಕರು / ಅಧ್ಯಾಪಕರುಗಳಿಗೆ ಆಧಾರ ಸಹಿತ ಆಕ್ಷೇಪಣೆಗಳನ್ನು ಸಲ್ಲಿಸಲು ಐದು ದಿನಗಳ ಅವಕಾಶವನ್ನು ನೀಡಲಾಗುವುದು. ನಿಗದಿತ ದಿನಾಂಕದ ನಂತರ ಬರುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ. ನಿಗದಿತ ದಿನಾಂಕದ ಒಳಗೆ ಸ್ವೀಕರಿಸಿದ ಆಕ್ಷೇಪಣೆಗಳನ್ನು ಸಂಬಂಧಪಟ್ಟ ವಿಷಯ ತಜ್ಞರ ಸಮಿತಿಗೆ ಒಪ್ಪಿಸಲಾಗುವುದು. ಈ ಬಗ್ಗೆ ತಜ್ಞರ ಸಮಿತಿಯು ನೀಡುವ ನಿರ್ಣಯವೇ ಅಂತಿಮವಾಗಿರುತ್ತದೆ.
2. ಎನ್.ಸಿ.ಸಿ., ಕ್ರೀಡೆ, ಆಂಗ್ಲೋ–ಇಂಡಿಯನ್, ಸೈನಿಕರು ಮತ್ತು ಮಾಜಿ ಸೈನಿಕರ ಮೀಸಲಾತಿ ವರ್ಗದ ಅಡಿಯಲ್ಲಿ ಸೀಟು ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಅದಕ್ಕೆ ಸಂಬಂಧಿಸಿದ ದಾಖಲಾತಿ / ಪ್ರಮಾಣ ಪತ್ರಗಳನ್ನು ಬ್ರೋಷರ್‌ನ ಅಧ್ಯಾಯ–3ರ ಐಟಂ–1(ಎ)ರಲ್ಲಿ ಪ್ರತಿ ವರ್ಗಕ್ಕೆ ನಿಗದಿಪಡಿಸಿರುವ ದಿನಾಂಕಗಳಂದೇ ವೈಯಕ್ತಿಕವಾಗಿ ಕಛೇರಿಯ ಸಮಯದಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ತಪ್ಪಿದಲ್ಲಿ ವಿಶೇಷ ವರ್ಗದ ಮೀಸಲಾತಿಯ ಅಡಿಯಲ್ಲಿ ದಾಖಲಾತಿ / ಪ್ರಮಾಣ ಪತ್ರಗಳನ್ನು ಪರಿಶೀಲಿಸಲು ಹಾಗೂ ಸಂಬಂಧಪಟ್ಟ ವಿಶೇಷ ವರ್ಗದ ಸೀಟು ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಅವಕಾಶ ನೀಡಲಾಗುವುದಿಲ್ಲ.
3. 2011ರ ಎರಡನೇ ಪಿಯುಸಿ ವಾರ್ಷಿಕ ಪರೀಕ್ಷೆಗೆ ಹಾಜರಾಗುವ ಕರ್ನಾಟಕದ ಅಭ್ಯರ್ಥಿಗಳು ತಮ್ಮ ಪಿಯುಸಿ ಅಂಕಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸಲ್ಲಿಸಬೇಕಾದ ಅವಶ್ಯಕತೆ ಇರುವುದಿಲ್ಲ. ಆದರೆ, 2011ರ ವಾರ್ಷಿಕ ಪರೀಕ್ಷೆಯಲ್ಲಿ ಹಾಜರಾಗಿ 12ನೇ ತರಗತಿಯಲ್ಲಿ ಉತ್ತೀರ್ಣರಾದ ಸಿ.ಬಿ.ಎಸ್.ಇ. / ಸಿ.ಐ.ಎಸ್.ಸಿ.ಇ., 10+2 ಮತ್ತು ಇತರೆ ಪರೀಕ್ಷಾ ಮಂಡಳಿಗಳ ವಿದ್ಯಾರ್ಥಿಗಳು ಮತ್ತು ಕರ್ನಾಟಕದ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ಪುನರಾವರ್ತಿತ ಅಭ್ಯರ್ಥಿಗಳು (2011ರ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳನ್ನು ಹೊರತುಪಡಿಸಿ) ತಮ್ಮ ಪಿಯುಸಿ ಅಂಕಪಟ್ಟಿಯ ಫೋಟೊಪ್ರತಿಯನ್ನು ದಿನಾಂಕ **11–05–2011**ರ ಒಳಗೆ ತಲುಪುವಂತೆ ವೈಯಕ್ತಿಕವಾಗಿ ಅಥವಾ ಸ್ಪೀಡ್ ಪೋಸ್ಟ್ ಮುಖಾಂತರ ಕಡ್ಡಾಯವಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ದಿನಾಂಕ **11–05–2011**ರ ನಂತರ ತಮ್ಮ ಪಿಯುಸಿ ಅಂಕಪಟ್ಟಿಯ ಫೋಟೊಪ್ರತಿಯನ್ನು ಸಲ್ಲಿಸುವ ವಿದ್ಯಾರ್ಥಿಗಳಿಗೆ ಸೀಟು ಆಯ್ಕೆ ಪ್ರಕ್ರಿಯೆ ಪ್ರಾರಂಭವಾಗುವ ಮೊದಲು ಅಥವಾ ಅಂಕಪಟ್ಟಿಯ ಫೋಟೊಪ್ರತಿಯನ್ನು ಸಲ್ಲಿಸಿದ ನಂತರವೇ ರ್‍ಯಾಂಕನ್ನು ನೀಡಲಾಗುವುದು.

4. ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಕ್ಕಾಗಿ ರ್‍ಯಾಂಕ್ ಪಟ್ಟಿಯನ್ನು, ಅಭ್ಯರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆಯ ಭೌತಶಾಸ್ತ್ರ, ರಾಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ವಿಷಯಗಳಲ್ಲಿ ಪಡೆದ ಅಂಕಗಳನ್ನು ಆಧರಿಸಿ ಪ್ರಕಟಿಸಲಾಗುವುದು. ಅರ್ಹತಾ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಾಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ವಿಷಯಗಳಲ್ಲಿ ಕನಿಷ್ಠ ಶೇಕಡ 50ರಷ್ಟು ಅಂಕಗಳು ಮತ್ತು ಸಾಮಾನ್ಯ ಪ್ರವೇಶ ಪರೀಕ್ಷೆಯ ಸದರಿ ವಿಷಯಗಳಲ್ಲಿ ಕನಿಷ್ಠ ಶೇಕಡ 50ರಷ್ಟು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಮಾತ್ರ ವೈದ್ಯಕೀಯ / ದಂತ ವೈದ್ಯಕೀಯ ರ್‍ಯಾಂಕನ್ನು ನೀಡಲಾಗುವುದು. ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಾಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ವಿಷಯಗಳಲ್ಲಿ ಶೇ. 50ಕ್ಕಿಂತ ಕಡಿಮೆ ಅಂಕಗಳನ್ನು ಪಡೆದ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ವೈದ್ಯಕೀಯ / ದಂತ ವೈದ್ಯಕೀಯ ರ್‍ಯಾಂಕನ್ನು ನೀಡಲಾಗುವುದಿಲ್ಲ. ಆದರೆ, ಪ.ಜಾ, ಪ.ಪಂ., ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ವಿದ್ಯಾರ್ಥಿಗಳು ಅರ್ಹತಾ ಪರೀಕ್ಷೆಯ ಪಿಸಿಬಿ ವಿಷಯಗಳಲ್ಲಿ ಮತ್ತು ಸಾಮಾನ್ಯ ಪ್ರವೇಶ ಪರೀಕ್ಷೆಯ ಪಿಸಿಬಿ ವಿಷಯಗಳಲ್ಲಿ ಕನಿಷ್ಠ ಶೇ. 40ರಷ್ಟು ಅಂಕಗಳನ್ನು ಪಡೆದಿದ್ದಲ್ಲಿ ವೈದ್ಯಕೀಯ / ದಂತ ವೈದ್ಯಕೀಯ ರ್‍ಯಾಂಕನ್ನು ನೀಡಲಾಗುವುದು.

5. ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಾಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ವಿಷಯಗಳಲ್ಲಿ ಕನಿಷ್ಠ ಶೇ.50ರಷ್ಟು ಅಂಕಗಳನ್ನು ಪಡೆದು, ಸಾಮಾನ್ಯ ಪ್ರವೇಶ ಪರೀಕ್ಷೆಯ ಭೌತಶಾಸ್ತ್ರ, ರಾಸಾಯನಶಾಸ್ತ್ರ ಮತ್ತು ಜೀವಶಾಸ್ತ್ರ ವಿಷಯಗಳಲ್ಲಿ ಎಷ್ಟೇ ಅಂಕಗಳನ್ನು ಪಡೆದಿದ್ದರೂ ಸಹ ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಕೋರ್ಸುಗಳ ಪ್ರವೇಶಕ್ಕಾಗಿ ರ್‍ಯಾಂಕ್‌ಗಳನ್ನು ಪ್ರಕಟಿಸಲಾಗುವುದು. ಪ.ಜಾ, ಪ.ಪಂ., ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ವಿದ್ಯಾರ್ಥಿಗಳು ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಕೋರ್ಸುಗಳಿಗೆ ರ್‍ಯಾಂಕ್ ಪಡೆಯಲು ಅರ್ಹತಾ ಪರೀಕ್ಷೆಯ ಪಿಸಿಬಿ ವಿಷಯಗಳಲ್ಲಿ ಕನಿಷ್ಠ ಶೇ. 40ರಷ್ಟು ಅಂಕಗಳನ್ನು ಪಡೆದಿರಬೇಕು.

6. ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ಭೌತಶಾಸ್ತ್ರ, ರಾಸಾಯನಶಾಸ್ತ್ರ ಮತ್ತು ಗಣಿತ ವಿಷಯಗಳಲ್ಲಿ ಕನಿಷ್ಠ ಶೇ. 50ರಷ್ಟು ಅಂಕಗಳನ್ನು ಪಡೆದು, ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ಎಷ್ಟೇ ಅಂಕಗಳನ್ನು ಪಡೆದಿದ್ದರೂ ಸಹ, ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಕೋರ್ಸುಗಳ ಪ್ರವೇಶಕ್ಕಾಗಿ ರ್‍ಯಾಂಕ್‌ಗಳನ್ನು ಪ್ರಕಟಿಸಲಾಗುವುದು. ಪ.ಜಾ, ಪ.ಪಂ., ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ವಿದ್ಯಾರ್ಥಿಗಳು ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಕೋರ್ಸುಗಳಿಗೆ ರ್‍ಯಾಂಕ್ ಪಡೆಯಲು ಕನಿಷ್ಠ ಶೇ. 45ರಷ್ಟು ಅಂಕಗಳನ್ನು ಅರ್ಹತಾ ಪರೀಕ್ಷೆಯ ಐಚ್ಛಿಕ ವಿಷಯಗಳಲ್ಲಿ ಪಡೆದಿರಬೇಕು.

7. ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ಗಣಿತ ವಿಷಯವನ್ನು ಒಂದು ಐಚ್ಛಿಕ ವಿಷಯವನ್ನಾಗಿ ಅಭ್ಯಸಿಸಿ, ಒಟ್ಟಾರೆ ಶೇ. 50ರಷ್ಟು ಅಂಕಗಳನ್ನು ಪಡೆದು, (ಪ.ಜಾ, ಪ.ಪಂ, ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ವಿದ್ಯಾರ್ಥಿಗಳು ಮತ್ತು ಬುದ್ಧಿಮಾಂದ್ಯ ಅಥವಾ ಮನೋರೋಗ ಅಭ್ಯರ್ಥಿಗಳು (including dislexia) ಅರ್ಹತಾ ಪರೀಕ್ಷೆಯಲ್ಲಿ ಒಟ್ಟಾರೆ ಶೇ. 45ರಷ್ಟು ಅಂಕಗಳನ್ನು ಪಡೆದಿರಬೇಕು ನಾಟಾ (NATA) ಪರೀಕ್ಷೆಯಲ್ಲಿ ಶೇ. 40ರಷ್ಟು ಅಂಕಗಳನ್ನು ಪಡೆದಿರುವ ಅಭ್ಯರ್ಥಿಗಳಿಗೆ ಮಾತ್ರ (ಪ.ಜಾ, ಪ.ಪಂ, ಪ್ರವರ್ಗ–1, 2ಎ, 2ಬಿ, 3ಎ ಮತ್ತು 3ಬಿ ಅಭ್ಯರ್ಥಿಗಳೂ ಸೇರಿದಂತೆ) ಆರ್ಕಿಟೆಕ್ಚರ್ ಕೋರ್ಸ್ ಪ್ರವೇಶಕ್ಕಾಗಿ ರ್‍ಯಾಂಕ್‌ಗಳನ್ನು ಪ್ರಕಟಿಸಲಾಗುವುದು. ಆರ್ಕಿಟೆಕ್ಚರ್ ಕೋರ್ಸ್‌ಗೆ ಮಾತ್ರ ಪ್ರವೇಶ ಬಯಸುವ ವಿದ್ಯಾರ್ಥಿಗಳು ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕಾದ ಅವಶ್ಯಕತೆ ಇರುವುದಿಲ್ಲ ಆದರೆ ಸಿಇಟಿ–2011ರ ಭರ್ತಿ ಮಾಡಿದ ಅರ್ಜಿ ನಮೂನೆಗಳನ್ನು ನಿಗದಿತ ದಿನಾಂಕದೊಳಗೆ ಕಡ್ಡಾಯವಾಗಿ ಸಲ್ಲಿಸಬೇಕು.

8. ಫಲಿತಾಂಶ ಪಟ್ಟಿಯಲ್ಲಿ ನೀಡಿರುವ ಅರ್ಹತಾ ಪರೀಕ್ಷೆಯ ಅಂಕಗಳನ್ನು ಅಭ್ಯರ್ಥಿಗಳು ತಪ್ಪದೇ ಪರಿಶೀಲಿಸಬೇಕೆಂದು ಕೋರಿದೆ. ಅರ್ಹತಾ ಪರೀಕ್ಷೆಯ ಅಂಕಗಳಲ್ಲಿ ವ್ಯತ್ಯಾಸಗಳೇನಾದರೂ ಕಂಡು ಬಂದಲ್ಲಿ ಪರಿಷ್ಕೃತ ರ್‍ಯಾಂಕ್‌ನ್ನು ಪಡೆಯಲು ತಕ್ಷಣ ಈ ಕಛೇರಿಯ ಗಮನಕ್ಕೆ ತರಲು ಕೋರಿದೆ.

9. ಅರ್ಹತಾ ಪರೀಕ್ಷೆಯ ಮರುಮೌಲ್ಯಮಾಪನ ಅಥವಾ ಮರು ಎಣಿಕೆಯಿಂದಾಗಿ ಅಂಕಗಳೇನಾದರೂ ಬದಲಾದಲ್ಲಿ ಅಂತಹ ಅಭ್ಯರ್ಥಿಗಳು ಪರಿಷ್ಕೃತ ರ್‍ಯಾಂಕ್‌ನ್ನು ಪಡೆಯುವುದಕ್ಕಾಗಿ ಕೂಡಲೇ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ನವೀಕೃತ ಅಂಕಪಟ್ಟಿಯ ಪ್ರತಿಯನ್ನು ಸಲ್ಲಿಸಬೇಕು.

10. ವಿಶೇಷ ವರ್ಗದ ಅಡಿಯಲ್ಲಿ ಬರುವ ವಿಕಲಾತೀತರು, ಎನ್.ಸಿ.ಸಿ ಮತ್ತು ಕ್ರೀಡಾ ಅಭ್ಯರ್ಥಿಗಳಿಗೆ ವೈದ್ಯಕೀಯ / ದಂತ ವೈದ್ಯಕೀಯ, ಭಾರತೀಯ ವೈದ್ಯಪದ್ಧತಿ ಮತ್ತು ಹೋಮಿಯೋಪತಿ, ಇಂಜಿನಿಯರಿಂಗ್ / ಟೆಕ್ನಾಲಜಿ ಕೋರ್ಸುಗಳಿಗೆ ಪ್ರತ್ಯೇಕವಾಗಿ ಸೀಟು ಆಯ್ಕೆ ಪ್ರಕ್ರಿಯೆಯನ್ನು ನಡೆಸಲಾಗುವುದು. ಆದರೆ, ಇತರೆ ವಿಶೇಷ ವರ್ಗಗಳ ಅಡಿಯಲ್ಲಿ ಬರುವ

ಸೈನಿಕರು, ಮಾಜಿ ಸೈನಿಕರು, ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ಆಂಗ್ಲೋ–ಇಂಡಿಯನ್ ಅಭ್ಯರ್ಥಿಗಳು ತಮ್ಮ ವಿಶೇಷ ವರ್ಗಗಳ ಅಡಿಯಲ್ಲಿ ಮೀಸಲಾಗಿರುವ ಸೀಟುಗಳನ್ನು ತಮ್ಮ ರ್‍ಯಾಂಕ್‌ಗಳಿಗೆ ಅನುಗುಣವಾಗಿ ಅವರು ಸಾಮಾನ್ಯ ಸುತ್ತಿನ ಸೀಟು ಆಯ್ಕೆ ಪ್ರಕ್ರಿಯೆಯಲ್ಲಿ ಭಾಗವಹಿಸಿದಾಗ ಆಯ್ಕೆ ಮಾಡಿಕೊಳ್ಳಬಹುದು. ವಿವರಗಳಿಗಾಗಿ ಅನುಬಂಧ –7ನ್ನು ನೋಡಿ.

11. ಎಲ್ಲಾ ಅಭ್ಯರ್ಥಿಗಳು (ಸಾಮಾನ್ಯ ವರ್ಗ, ಪ.ಜಾ, ಪ.ಪಂ., ಮತ್ತು ಇತರೆ ಹಿಂದುಳಿದ ವರ್ಗಗಳ ಅಭ್ಯರ್ಥಿಗಳೂ ಸೇರಿದಂತೆ) ಅವರು ಓದಿದ ತರಗತಿ, ಓದಿದ ಶೈಕ್ಷಣಿಕ ವರ್ಷಗಳು, ಮಾತೃ ಭಾಷೆಯನ್ನೊಳಗೊಂಡ ವ್ಯಾಸಂಗ ಪ್ರಮಾಣ ಪತ್ರವನ್ನು (ಅನುಬಂಧ–5ರಲ್ಲಿ ನೀಡಿರುವ ನಮೂನೆಯಂತೆ) ಅವರು ಎಸ್.ಎಸ್.ಎಲ್.ಸಿ / 10ನೇ ತರಗತಿಯಲ್ಲಿ ವ್ಯಾಸಂಗ ಮಾಡಿದ ಶಾಲಾ ಮುಖ್ಯಸ್ಥರಿಂದ, ಶಾಲೆಯ ದಾಖಲಾತಿ ವಹಿಯಲ್ಲಿ ಇರುವಂತೆ ಪಡೆದು ಕಡ್ಡಾಯವಾಗಿ ಹಾಜರುಪಡಿಸಬೇಕು.

12. ಮೀಸಲಾತಿ ಅಡಿಯಲ್ಲಿ ಸೀಟನ್ನು ಆಯ್ಕೆ ಮಾಡಿಕೊಳ್ಳುವ ಅಭ್ಯರ್ಥಿಗಳು ಜಾತಿ / ಆದಾಯ ಪ್ರಮಾಣಪತ್ರವನ್ನು ಸಂಬಂಧಪಟ್ಟ ತಹಸೀಲ್ದಾರರಿಂದ ಪಡೆದು ಸೀಟು ಆಯ್ಕೆ ಸಮಯದಲ್ಲಿ ಸಲ್ಲಿಸಬೇಕು. ಪ.ಜಾತಿ ಮತ್ತು ಪ.ಪಂಗಡದ ಅಭ್ಯರ್ಥಿಗಳು ನಮೂನೆ ಡಿ ಯಲ್ಲಿ, ಪ್ರವರ್ಗ 1ರ ಅಭ್ಯರ್ಥಿಗಳು ನಮೂನೆ ಇ ಯಲ್ಲಿ ಮತ್ತು ಪ್ರವರ್ಗ 2ಎ, 2ಬಿ, 3ಎ ಮತ್ತು 3ಬಿ ಅಭ್ಯರ್ಥಿಗಳು ನಮೂನೆ ಎಫ್ ನಲ್ಲಿ ಜಾತಿ / ಆದಾಯ ಪ್ರಮಾಣಪತ್ರವನ್ನು ಸಲ್ಲಿಸಬೇಕು.

13. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಸಿಇಟಿ ಸೆಲ್) ಮೂಲಕ ಈ ಹಿಂದಿನ ವರ್ಷಗಳಲ್ಲಿ ಯಾವುದಾದರೂ ವಿಭಾಗದಲ್ಲಿ ಸೀಟನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಈ ಬಾರಿ ಅದೇ ವಿಭಾಗದಲ್ಲಿ ಸೀಟನ್ನು ಆಯ್ಕೆ ಮಾಡಿಕೊಳ್ಳಲು ಅರ್ಹರಿರುವುದಿಲ್ಲ. ಅಂತಹ ವಿದ್ಯಾರ್ಥಿಗಳು ಈ ವರ್ಷ ಬೇರೆ ವಿಭಾಗಗಳಲ್ಲಿ ಸೀಟನ್ನು ಆಯ್ಕೆ ಮಾಡಿಕೊಂಡಲ್ಲಿ ಅವರು ಹಿಂದಿನ ವರ್ಷಗಳಲ್ಲಿ ಆಯ್ಕೆ ಮಾಡಿಕೊಂಡಿದ್ದ ಸೀಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

14. ಈ ಬ್ರೋಶರ್ ನಲ್ಲಿರುವ ಶುಲ್ಕ ಮರುಪಾವತಿ ಮತ್ತು ಮುಟ್ಟುಗೋಲಿನ ಬಗ್ಗೆ ದಯಮಾಡಿ ಓದಲು ಕೋರಿದೆ.

15. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ತನ್ನ ವೆಬ್‌ಸೈಟ್‌ನಲ್ಲಿ http://kea.kar.nic.in ವೈದ್ಯಕೀಯ / ದಂತ ವೈದ್ಯಕೀಯ / ಆಯುರ್ವೇದ / ಹೋಮಿಯೋಪತಿ / ಯುನಾನಿ / ನ್ಯಾಚುರೋಪತಿ ಮತ್ತು ಯೋಗ / ಇಂಜಿನಿಯರಿಂಗ್ / ಟೆಕ್ನಾಲಜಿ / ಆರ್ಕಿಟೆಕ್ಚರ್ ಸೀಟುಗಳನ್ನು ಮೀಸಲಾತಿ ಅಡಿಯಲ್ಲಿ ಆಯ್ಕೆಮಾಡಿಕೊಳ್ಳುವ ಅಭ್ಯರ್ಥಿಗಳ ಎಲ್ಲಾ ವಿವರಗಳನ್ನು ಅಂದರೆ ಅಭ್ಯರ್ಥಿಯ ಹೆಸರು, ತಂದೆಯ/ಪೋಷಕರ ಹೆಸರು, ಯಾವ ಪ್ರವರ್ಗದಲ್ಲಿ ಸೀಟು ಆಯ್ಕೆಮಾಡಿಕೊಂಡಿದ್ದಾರೆ, ತಂದೆ/ತಾಯಿಯ ಪೋಷಕರ ವಾರ್ಷಿಕ ಆದಾಯ ಇತ್ಯಾದಿಯನ್ನು ಕ್ಯಾಶುಯಲ್ ಆಯ್ಕೆ ಪ್ರಕ್ರಿಯೆ ಮುಗಿದ ನಂತರ ಪ್ರಕಟಿಸಲಾಗುತ್ತದೆ.

16. ಅಭ್ಯರ್ಥಿಯು ಕ್ಯಾಶುಯಲ್ ತೆರವು ಹಂತದವರೆಗೂ ಸೀಟನ್ನು ರದ್ದು ಪಡಿಸದೇ ಇದ್ದಲ್ಲಿ ಅಭ್ಯರ್ಥಿಯು ಸಂಬಂಧಿಸಿದ ಕಾಲೇಜಿನಲ್ಲಿ ಪ್ರವೇಶ ಪಡೆದಿರುತ್ತಾನೆಂದು ಪರಿಗಣಿಸಲಾಗುತ್ತದೆ.

17. ಅಭ್ಯರ್ಥಿಯು ಸೀಟನ್ನು ಕೆಇಎ ಕಛೇರಿಯಲ್ಲಿ ಮಾತ್ರ ರದ್ದುಪಡಿಸಬೇಕು. ಸೀಟನ್ನು ಆಯ್ಕೆ ಮಾಡಿ ಸಂಬಂಧಪಟ್ಟ ಕಾಲೇಜಿಗೆ ಪ್ರವೇಶ ಪಡೆಯದೆ ಇದ್ದ ಮಾತ್ರಕ್ಕೆ ತಾವು ಆಯ್ಕೆ ಮಾಡಿದ್ದ ಸೀಟನ್ನು ಕೆಇಎ ಕಛೇರಿಯಲ್ಲಿ ರದ್ದು ಪಡಿಸಿಕೊಳ್ಳಲಾಗಿದೆಯೆಂದು ಭಾವಿಸಬಾರದು.

18. ಗ್ರಾಮೀಣ ಮೀಸಲಾತಿಯನ್ನು ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಅವರು ಓದಿದ ಶಾಲೆಯ / ಪ್ರೌಢಶಾಲೆಯ ಮುಖ್ಯಸ್ಥರಿಂದ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರವನ್ನು ಪಡೆದು ಅದನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ರುಜು ಮಾಡಿಸಿ ಸಲ್ಲಿಸಬೇಕು. (ಬ್ರೋಶರ್ ನ ಪುಟ ಸಂಖ್ಯೆ 56 ನ್ನು ನೋಡಿ)

19. ಗ್ರಾಮೀಣ ಮೀಸಲಾತಿಯನ್ನು ಪಡೆಯಲಿಚ್ಛಿಸುವ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಅವರು ಓದಿದ ಶಾಲೆಯ / ಪ್ರೌಢಶಾಲೆಯ ಮುಖ್ಯಸ್ಥರಿಂದ ಪಡೆದ ಗ್ರಾಮೀಣ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಸಂಬಂಧಪಟ್ಟ ತಹಸೀಲ್ದಾರರಿಂದ ಪಡೆದ ಆದಾಯ ಪ್ರಮಾಣಪತ್ರವನ್ನು ಸಹ ಸಲ್ಲಿಸಬೇಕು. (ಬ್ರೋಶರ್ ನ ಪುಟ ಸಂಖ್ಯೆ 52 ನ್ನು ನೋಡಿ)

20. ಅನುಬಂಧ–3ರಲ್ಲಿ ನೀಡಿರುವ ಸ್ಥಳಗಳಲ್ಲಿ ಓದಿರುವ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಆದರೆ, ಅಭ್ಯರ್ಥಿಗಳು 1 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡಿದ ಸ್ಥಳವು ಗ್ರಾಮೀಣ ಪ್ರದೇಶವಾಗಿದ್ದು, ಆ ನಂತರ ಆ ಪ್ರದೇಶವು ನಗರ ಪ್ರದೇಶವೆಂದು ಪ್ರಕಟಿಸಲ್ಪಟ್ಟಿದ್ದರೂ ಸಹ ಅಂತಹ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಅರ್ಹರಾಗಿರುತ್ತಾರೆ.

## WHAT IS NEW IN THIS YEAR?

- From this year KEA will hold ONLINE seat selection process at Belgaum and Chitradurga apart from Shimoga, Mangalore, Hubli, Gulbarga and Bangalore for Medical, Dental, Indian Systems of Medicine and Homoeopathy, Engineering / Technology and Architecture courses. Please read page 35 for more details.
- From this year, for admission to Engineering / Technology courses, a candidate has to obtain an aggregate minimum of 50% marks in the optional subjects in the Qualifying Examination. 45% of marks in Q.E. in case of SC, ST, Category-I, 2A, 2B, 3A and 3B Category candidates, please read page 12 for more details about eligibility.
- Eligibility criteria for admission to Engineering / Technology courses will be Chemistry / Bio-Technology / Biology along with Physics and Mathematics, as per AICTE Approval 2011-2012 Hand book. Electronics and Computer Science studied in the qualifying examination will not be considered along with Physics and Mathematics for eligibility for admission to Engineering courses from this year.
- The application form is a combination of both ICR and OMR concept. Candidates are required to fill the application form using blue or black ballpoint pen and also for few items candidates are required to fill and shade the respective circles of item.
- The candidates who have studied in the areas mentioned in Appendix-III are not eligible to claim rural category seat. However, if the place where the candidate had studied from 1st to 10th standard had been declared as a rural area at the time of his / her studies, he / she will be eligible under rural quota, even though the same place has been declared as urban area later.
- Candidates will receive SMS alerts from KEA, with regard to Common Entrance Test, Seat Selection Process and other important events. Therefore, candidates or required to furnish their mobile number invariably in the application form.

## ಈ ವರ್ಷ ಹೊಸದೇನಿದೆ?

- ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಈ ವರ್ಷದಿಂದ ವೈದ್ಯಕೀಯ, ದಂತ ವೈದ್ಯಕೀಯ, ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ, ಇಂಜಿನಿಯರಿಂಗ್, ಟೆಕ್ನಾಲಜಿ, ಆರ್ಕಿಟೆಕ್ಚರ್ ಸೀಟು ಆಯ್ಕೆ ಪ್ರಕ್ರಿಯೆಯನ್ನು ಆನ್ ಲೈನ್ ಮೂಲಕ ಬೆಂಗಳೂರು, ಹುಬ್ಬಳ್ಳಿ, ಗುಲ್ಬರ್ಗ, ಶಿವಮೊಗ್ಗ ಮತ್ತು ಮಂಗಳೂರು ಸೇರಿದಂತೆ ಚಿತ್ರದುರ್ಗ ಹಾಗೂ ಬೆಳಗಾವಿ ಕೇಂದ್ರಗಳಲ್ಲಿ ನಡೆಸಲಿದೆ. ಈ ಬಗ್ಗೆ ಹೆಚ್ಚಿನ ವಿಷಯಗಳಿಗಾಗಿ ಪುಟ 35ನ್ನು ಓದಿ.
- ಈ ವರ್ಷದಿಂದ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಕೋರ್ಸುಗಳ ಪ್ರವೇಶಕ್ಕಾಗಿ ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಅರ್ಹತಾ ಪರೀಕ್ಷೆಯ ಐಚ್ಛಿಕ ವಿಷಯಗಳಲ್ಲಿ ಕನಿಷ್ಠ ಶೇ. 50 ರಷ್ಟು ಅಂಕಗಳನ್ನು ಪಡೆದಿರಬೇಕು. ಪ.ಜಾ, ಪ.ಪಂ., ಪ್ರವರ್ಗ 1, 2ಎ, 2ಬಿ, 3ಎ ಮತ್ತು 3ಬಿ ವಿದ್ಯಾರ್ಥಿಗಳು ಕನಿಷ್ಠ ಶೇ. 45 ರಷ್ಟು ಅಂಕಗಳನ್ನು ಅರ್ಹತಾ ಪರೀಕ್ಷೆಯ ಐಚ್ಛಿಕ ವಿಷಯಗಳಲ್ಲಿ ಪಡೆದಿರಬೇಕು. ಪುಟ 12 ರಲ್ಲಿ ನೀಡಿರುವ ಹೆಚ್ಚಿನ ಅರ್ಹತಾ ವಿವರಗಳನ್ನು ಓದಿ.
- ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಕೋರ್ಸುಗಳ ಪ್ರವೇಶಕ್ಕಾಗಿ, 2011–2012ನೇ ಸಾಲಿಗೆ ಎಐಸಿಟಿಯ ಅನುಮೋದನೆಯ ಕೈಪಿಡಿಯಂತೆ, ಅರ್ಹತಾ ಪರೀಕ್ಷೆಯ ಭೌತಶಾಸ್ತ್ರ ಮತ್ತು ಗಣಿತ ವಿಷಯಗಳ ಜೊತೆಯಲ್ಲಿ ರಸಾಯನ ಶಾಸ್ತ್ರ / ಜೀವಶಾಸ್ತ್ರ / ಜೈವಿಕ ತಂತ್ರಜ್ಞಾನವನ್ನು ಮಾತ್ರ ಪರಿಗಣಿಸಲಾಗುವುದು. ಭೌತಶಾಸ್ತ್ರ ಮತ್ತು ಗಣಿತ ವಿಷಯಗಳ ಜೊತೆಯಲ್ಲಿ ಅರ್ಹತಾ ಪರೀಕ್ಷೆಯ ಎಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಸೈನ್ಸ್ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.
- ಅರ್ಜಿ ನಮೂನೆಯು ಐಸಿಆರ್ ಮತ್ತು ಓಎಂಆರ್ ವಿಧಾನದ ಅರ್ಜಿಯಾಗಿರುತ್ತದೆ. ಅಭ್ಯರ್ಥಿಗಳು ಅರ್ಜಿಯನ್ನು ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್ನನ್ನು ಉಪಯೋಗಿಸಿ ಬರೆಯಬೇಕು ಹಾಗೂ ಕೆಲವು ಐಟಂಗಳನ್ನು ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನೂ ಸಹ ತುಂಬಬೇಕು.
- ಅನುಬಂಧ – 3ರಲ್ಲಿ ನೀಡಿರುವ ಸ್ಥಳಗಳಲ್ಲಿ ಓದಿರುವ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಅರ್ಹರಾಗಿರುವುದಿಲ್ಲ. ಆದರೆ, ಅಭ್ಯರ್ಥಿಗಳು 1 ರಿಂದ 10 ನೇ ತರಗತಿವರೆಗೆ ವ್ಯಾಸಾಂಗ ಮಾಡಿದ ಸ್ಥಳವು ಗ್ರಾಮೀಣ ಪ್ರದೇಶವಾಗಿದ್ದು, ಆ ನಂತರ ಆ ಪ್ರದೇಶವು ನಗರ ಪ್ರದೇಶವೆಂದು ಪ್ರಕಟಿಸಲ್ಪಟ್ಟಿದ್ದರೂ ಸಹ ಅಂತಹ ಅಭ್ಯರ್ಥಿಗಳು ಗ್ರಾಮೀಣ ಮೀಸಲಾತಿಯನ್ನು ಪಡೆಯಲು ಅರ್ಹರಾಗಿರುತ್ತಾರೆ.
- ಸಾಮಾನ್ಯ ಪ್ರವೇಶ ಪರೀಕ್ಷೆ, ಸೀಟು ಆಯ್ಕೆ ಪ್ರಕ್ರಿಯೆ ಮತ್ತು ಇನ್ನಿತರ ಮುಖ್ಯ ಮಾಹಿತಿಗಳನ್ನು ಪ್ರಾಧಿಕಾರದಿಂದ ಅಭ್ಯರ್ಥಿಗಳಿಗೆ ಎಸ್ಎಂಎಸ್ ಮುಖಾಂತರ ಸೂಚನೆಗಳನ್ನು ಕಳುಹಿಸಲಾಗುವುದು. ಆದ್ದರಿಂದ ಅಭ್ಯರ್ಥಿಗಳು ಅರ್ಜಿ ನಮೂನೆಯಲ್ಲಿ ತಮ್ಮ ಮೊಬೈಲ್ ನಂಬರನ್ನು ತಪ್ಪದೆ ಒದಗಿಸಬೇಕು.